## ಫೋಟೊ ಪ್ರಬಂಧ

ನೀವು ಅಷ್ಟು ದೂರದಿಂದ ಬಂದದ್ದು ಬೇಕಾರ್ ಆಗಬಾರದಲ್ಲ' ಎಂದಾತ ಚಡಪಡಿಸುತ್ತಿದ್ದ. ಆತನಿಗೆ ನಿನ್ನೆ ದಿನ ಹುಲಿಗಳು ಕಾಣಿಸಿಕೊಂಡ ಜಾಗದ ಖಚಿತ ವರ್ತಮಾನವೂ ಸಿಕ್ಕಿಹೋಗಿತ್ತು. ಹುಲಿಗಳು ಜಾಗ ಬದಲಾಯಿಸುವ ಮೊದಲೇ ನಮ್ಮನ್ನು ಕರೆದೊಯ್ದು ತೋರಿಸಬೇಕೆಂಬ ನಿಯತ್ತು ಅವನಲ್ಲಿತ್ತು.

'ಅಷ್ಟು ದೂರದ ಕರ್ನಾಟಕದಿಂದ ಬಂದಿದ್ದೀರಿ. ನಿಮಗೆ ನಿರಾಶೆ ಆಗಬಾರದಲ್ಲ' ಎಂದು ರೇಜಿಗೆ ಬರುವಷ್ಟು ಸಲ ಹೇಳುತ್ತಿದ್ದ. ಅಷ್ಟರಲ್ಲೇ ಅರಣ್ಯ ಇಲಾಖೆಯ ಚೆಕ್‌ಪೋಸ್ಟ್ ಬಂದಿತು. ಅಲ್ಲಿ ಇಲಾಖೆ ತಪಾಸಣೆ; ಪ್ರವೇಶದ ಅನುಮತಿಗೆ ಸರದಿ ಸಾಲು; ನಮ್ಮಗಳ ಗುರುತು ಖಾತ್ರಿ; ಲಗೇಜ್ ಚೆಕ್ಕಿಂಗ್ ಹಾಳಾಮೂಳು ಅಂತಾನೆ ಜಾಸ್ತಿ ಸಮಯ ಹಿಡಿಯುತ್ತೆ. ಬೇಗ ತಲುಪುವ ಒತ್ತಡದಲ್ಲಿದ್ದ ಆದಿಲ್ ತುಸು ಹೆಚ್ಚೇ ಚಡಪಡಿಸುತ್ತಿದ್ದ. ಅವನು ಹೇಳಿದ್ದು ಕೂಡ ಸರಿಯಾಗಿತ್ತು. ಅಲ್ಲಿನ ಅರಣ್ಯ ಪ್ರವೇಶಕ್ಕೆ ತುಂಬಾ ಸೂಕ್ಷ್ಮ ಕಾನೂನು, ತೀವ್ರ ಕಟ್ಟಳೆಗಳಿದ್ದವು.

ಅರಣ್ಯದ ಚೆಕ್‌ಪೋಸ್ಟ್ ದಾಟಿದ ನಂತರ ಜಿಮ್ ಕಾರ್ಬೆಟ್ ತಲುಪುವ ದುರ್ಗಮ ಹಾದಿ ಶುರುವಾಗುತ್ತದೆ. ನಾವು ಸುಮಾರು ನಲವತ್ತು ಕಿ.ಮೀ. ದೂರವನ್ನು ಕ್ಷಿಪ್ರವಾಗಿ ಕ್ರಮಿಸಬೇಕಿತ್ತು. ಆದರೆ ಇಲ್ಲಿನ ಕಾಡಿನ ರಸ್ತೆ ಸವೆಸುವುದು ಸಿಕ್ಕಾಪಟ್ಟೆ ತ್ರಾಸದಾಯಕ. ಅನೇಕ ಕಡೆ ರಸ್ತೆಯೇ ಇಲ್ಲ. ಬಂಡೆ ಕಲ್ಲುಗಳ ಹತ್ತಿಳಿದು ಹತ್ತು ಸಲ ಸಿಗುವ ರಾಮಗಂಗಾ ನದಿಯನ್ನು ಮತ್ತೆಮತ್ತೆ ದಾಟಬೇಕಿತ್ತು. ಬಹಳಷ್ಟು ಕಡೆ ನದಿಗೆ ಸೇತುವೆ ಇಲ್ಲದ ಕಾರಣ ಹರಿವ ನೀರಿನ ಮೂಲಕ ಜೀಪು ಹಾಯಬೇಕಿತ್ತು. ಕೆಳಗೆ ಯಮಗಾತ್ರದ ಬಂಡೆಗಳು. ಜೊತೆಗೆ ಆದಿಲ್ ಸಾಹೇಬನ ತೀವ್ರ ವೇಗದ ಚಾಲನೆ.

ಆಗ ಹೆಚ್ಚು ಮಾತಾಡದ ಸೈಲೆಂಡ್ ಹುಡುಗ ಅವಿನಾಶ್ ನೋಂಪಿ, 'ಏನ್ ಸಾರ್ ಇವನು, ಕಿಡ್ನಾಪ್ ಮಾಡಿ ಒಂಚೂರು ಕನಿಕರವಿಲ್ಲದ ವಿಲನ್ ಹೀರೋ ಮನೆಯವರನ್ನು ಎತ್ತಾಕಿಕೊಂಡು ಹೋಗೋ ತರ ನಮ್ಮನ್ನು ಸಾಗಿಸುತ್ತಿದ್ದಾನೆ. ಈಗಾಗಲೇ ಜೀವ ಬಾಯಿಗೆ ಬಂದಿದೆ; ಕೈ ಕಾಲುಗಳು ಕಳಚಿ ಬಿದ್ದು ನಮ್ಮ ಬಾಡಿ ಸ್ಪೇರ್ ಪಾರ್ಟ್‌ಗಳನ್ನು ಗೋಣಿಚೀಲದಲ್ಲಿ ತುಂಬಿ ಕೊಡ್ತಾನೋ ಏನೋ?' ಎಂದು ತಮಾಷೆ ಮಾಡುತ್ತಿದ್ದ. ಆ ತುಳುಕಾಟದಲ್ಲಿ ನಮ್ಮ ಹೈಬ್ರೀಡ್ ದೇಹಗಳ ಜತೆಗೆ, ದುಬಾರಿ ಕ್ಯಾಮೆರಾ ಮತ್ತು ಸೂಕ್ಷ್ಮ ಪ್ರಕೃತಿಯ ಲೆನ್ಸ್‌ಗಳ ಮಾನ ಪ್ರಾಣವನ್ನು ಕಾಪಾಡಿಕೊಳ್ಳುವ ಕಸರತ್ತು ಬಲು ಸಾಹಸಮಯವಾಗಿ ಕಂಡಿತು.

ಪಕ್ಕದಲ್ಲಿ ಹರಿಯುವ ಸುಂದರವಾದ ನದಿ. ಬೆಟ್ಟಗಳ ಮೇಲೆ ಬೆಳೆದು ನಿಂತ ದೈತ್ಯ ಮರಗಳು. ಸಡನ್ನಾಗಿ ಸಿಗುವ ಆಘಾತಕಾರಿ ತಿರುವುಗಳು. ರಸ್ತೆಯಿಲ್ಲದ ಕೋರೆ ಸಂದಿಗೊಂದಿಗಳಲ್ಲಿ, ಬಂಡೆ ಪ್ರಪಾತಗಳ ಸೆರಗಿನ ಅತಿಸೂಕ್ಷ್ಮ ಸಣ್ಣ ದಾರಿಯಲ್ಲಿ ಆತ ಜೀಪು ಓಡಿಸಿ ನಮ್ಮನ್ನು ದಂಗುಬಡಿಸಿದ. ದಡಬಡ ಎತ್ತಾಕುವ ಜೀಪಿನಲ್ಲಿ ಪ್ರಾಣ ಜೋಪಾನ ಮಾಡಿಕೊಳ್ಳುತ್ತಾ ನಿಸರ್ಗವನ್ನೂ ಸವಿಯುತ್ತಾ ಹಣ್ಣುಗಾಯಿ ನೀರುಗಾಯಿಯಾಗಿ ಮಧ್ಯಾಹ್ನ ಒಂದು ಗಂಟೆಗೆ ತಲುಪಿದೆವು.

ಡಿಕಾಲ ಎನ್ನುವ ಪ್ರದೇಶದಲ್ಲಿ ನಾವು ಉಳಿದುಕೊಳ್ಳುವ ವ್ಯವಸ್ಥೆಯನ್ನು ಆದಿಲ್ ಮಾಡಿದ್ದ. ಸಂಪೂರ್ಣ ಅರಣ್ಯ ಇಲಾಖೆಯ ಉಸ್ತುವಾರಿಯಲ್ಲಿರುವ ಇಲ್ಲಿ ಪ್ರವಾಸಿಗಳ ಆಗಮನ ಮತ್ತು ನಿರ್ಗಮನಗಳು ತುಂಬಾ ಸಮಯಪ್ರಜ್ಞೆಗೆ ಒಳಪಟ್ಟಿವೆ. ಜೊತೆಗೆ ನೀತಿನಿಯಮಗಳು ಜಾಸ್ತಿ. ಊಟ ತಿಂಡಿ ಮಾತ್ರ ಜೈಲಿಗಿಂತ ಕಡೆ. ಎರಡು ದಿನ ಮ್ಯಾಗಿ ಮತ್ತು ಬ್ರೆಡ್ಡಿನ ವ್ರತವನ್ನೇ ಆಚರಿಸಿಕೊಂಡೆವು.

ನಮ್ಮನ್ನು ಇಳಿಸಿದ ಆದಿಲ್, 'ನಿಮಗೆ ಇರುವುದು ಕೇವಲ ಇಪ್ಪತ್ತು ನಿಮಿಷ ಮಾತ್ರ. ಅಷ್ಟರಲ್ಲಿ ಲಗೇಜ್ ಇಟ್ಟು ಕ್ಯಾಮೆರಾ ತಗೊಂಡು ಬೇಗ ಬಂದು ಜೀಪಲ್ಲಿರಬೇಕು. ಇಲ್ಲಿಂದ ತಕ್ಷಣವೇ ಸಫಾರಿಗೆ ಹೊರಡಬೇಕು' ಎಂದು ಸೈನ್ಯದ ಭಾಷೆಯ ಖಡಕ್ ಸಂದೇಶ ಕೊಟ್ಟನು. ಆಗ ಊಟ ಮಾಡಲು ಸಮಯವೇ ಉಳಿದಿರಲಿಲ್ಲ. ತಕ್ಷಣ ಲಗೇಜನ್ನು ಒಯ್ದು ರೂಮಿನಲ್ಲಿ ಎತ್ತಾಕಿ, ಕ್ಯಾಮೆರಾ ಸರಿಮಾಡಿಕೊಂಡು ಬರುವಷ್ಟರಲ್ಲೇ ಅವನು ಗುಟ್ಕಾ ಚೀಟಿ ಏರಿಸಿಕೊಂಡು ಸನ್ನದ್ಧನಾಗಿದ್ದ. ಆ ಕ್ಷಣ ಅವನು ಊಟ, ಕಾಫಿ, ತಿಂಡಿ ಬಿಟ್ಟು ಬರೀ ಗುಟ್ಕಾ ತಿಂದೇ ಜೀವನಯಾಪನೆ ಮಾಡುವವನಂತೆ



ನಡೆದಷ್ಟೂ ಮುಗಿಯದ ದಾರಿ



ನಾವು ಯುದ್ಧಕ್ಕೆ ಹೊರಟವರಲ್ಲ, ಕೋವಿಯೂ ನಮ್ಮ ಬಳಿಯಲ್ಲಿಲ್ಲ